topped by a laudatory reference by Mrs. Gandhi. Every effort was made, she said, to shake her confidence in Mr. Urs which she felt was a delberate move, to see that she did not function effectively.

She commended the efficient manner in which Mr. Urs conducted the poll compaign and mobilised resources. But what helped her party most, she said, was Urs Government's record in the implementation of programmes''.

ಶ್ರೀ ಆರ್. ಗುಂಡೂರಾವ್.—ಇಲ್ಲ ಎಂದು ಯಾರು ಹೇಳಿಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳು ಓದಿದ್ದನ್ನು ಕೇಳಿದೆ. ಸ್ಟೇಂತ ಮೊಬಿಲೈಸ್ಡ್ ರೀಸೋರ್ಸಸ್ ಅದನ್ನು.....

ಶ್ರೀ ಡಿ. ದೇವರಾಜ ಅರಸ್.—ನೀವು ಆ ಬಗ್ಗೆ ಮಾತನಾಡಬೇಡಿ. ನೀವು ಏನು ಕಡಿಮೆ ಮಾಡಿರುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮತ್ತು ಮಾನ್ಯ ದೇವೇಗೌಡರು ಮಾತನಾಡುವಾಗ ಎರಡು ಪ್ರಶ್ನೆಗಳನ್ನು ಎತ್ತಿದೆವು, ಅದು ಗ್ರೋವರ್ ಕಮಿಷನ್ ವಿಷಯ. ಗ್ರೋವರ್ ಕಮಿಷನ್ ಬಗ್ಗೆ ಫಾಲೋ ಅಪ್ ಆಕ್ಷನ್ ಸರ್ಕಾರದವರು ಏನು ತೆಗೆದುಕೊಂಡಿದ್ದಾರೋ ಆದರ ಬಗ್ಗೆ ಸರ್ಕಾರದ ಕಡೆಯಿಂದ ಯಾವುದೇ ಉತ್ತರ ಬರಲಿಲ್ಲ. ಸರ್ಕಾರ ಮೌನವಾಗಿದೆ. ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಅವಕ್ಕೆ ನಾವು ಕೇಂದ್ರಕ್ಕೆ ಉತ್ತರ ಬರೆಯುತ್ತೇವೆ.

(ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗುಂಡೂರಾಯರು ಈಗ ಕೆಲವು ಮಾತುಗಳನ್ನು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಎರಡು ಮಾತುಗಳನ್ನು ಮಾತ್ರ ಹೇಳುವುದಿದೆ. ಈಗ ಮೊದಲನೆಯದಾಗಿ ನಾವು ಈ ಅವಿಶ್ವಾಸ ನಿರ್ಣಯವನ್ನು ಸದನದ ಮುಂದೆ ಮಂಡಿಸಿದ ಉದ್ದೇಶವೇನೆಂಬುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಅಧಿಕಾರದ ದುರುಪಯೋಗ ಮತ್ತು ಶಾಸಕರ ಮೇಲೆ ಒತ್ತಡ, ದಾಳಿ ಇದನ್ನೆಲ್ಲಾ ಮಾಡಿದರೂ ಕೂಡ ಚಿನ್ನದಂತೆ ಪುಟವಿಟ್ಟಂಥ ಶಾಸಕರು ಎಷ್ಟು ಜನರಿದ್ದಾರೆ, ಎಷ್ಟು ಜನ ನ್ಯಾಯವಾಗಿದ್ದಾರೆ ಎಂಬುದನ್ನು ಜನತೆಗೆ ತೋರಿಸಿಕೊಡಬೇಕು ಎಂಬುದು ನಮ್ಮ ಪ್ರಮುಖವಾದ ಉದ್ದೇಶ.

೮೨–೫೦ ಪಿ. ಎಂ.

ಏತಕ್ಕೆಂದರೆ, ದೇಶದಲ್ಲಿ ಸತ್ಯ ಹರಿಶ್ಚಂದ್ರರ ಹಾಗೆ ರಾಜ್ಯ ಸ್ಥಾಪನೆ ಮಾಡಬೇಕಾದರೆ ನೀವು ಆ ರೀತಿಯಾಗಿ ಮಾಡಬೇಕು. ಮತ್ತು ನಿಮ್ಮಲ್ಲಿ ಎಷ್ಟು ಜನ ಮತದಾರರ ಅಭಿಪ್ರಾಯದಂತೆ ಸರಿಯಾಗಿ ನಡೆದಿದ್ದೀರಿ ? ಈರೀತಿಯಾಗಿ ನಾವು ಇನ್ನು ಅನೇಕ ಥಾರ್ಜಸ್‌ಗಳನ್ನು ಮಾಡಿದ್ದೇವೆ. ಕೆಲವು ಥಾರ್ಜಸ್‌ಗಳಿಗೆ ಮಾತ್ರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆ ಉತ್ತರ ಅಷ್ಟು ತೃಪ್ತಿಕರವಾಗಿಲ್ಲದಿದ್ದರೂ ಕೂಡ ಇನ್ನು ಕೆಲವು ಪ್ರಶ್ನೆಗಳಿಗೆ ಉತ್ತರವನ್ನೆ ಕೊಟ್ಟಿಲ್ಲಾ. ಇನ್ನು ಕೆಲವು ಥಾರ್ಜಸ್‌ಗಳಿಗೆ ಅವರು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಪ್ರಮುಖವಾಗಿ ಹೇಳಬೇಕಾದರೆ ಬೆಂಗಳೂರು ಆರಮನೆಯ ವಿಚಾರ.....

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಇದಕ್ಕೆ ಉತ್ತರ ಕೊಟ್ಟಾದ ಮೇಲೆ ವಿರೋಧ ಪಕ್ಷದ ನಾಯಕರು ಕ್ಲಾರಿಫಿಕೇಷನ್ ಕೇಳುವುದು ಕ್ರಮಬದ್ಧವಾಗಿದೆ. ಆದರೆ ಇವರು ಕೇಳುವಂಥಾದ್ದು ಕ್ರಮಬದ್ಧವಾದುದಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಬೆಂಗಳೂರು ಆರಮನೆಯ ವಿಚಾರದ ಬಗ್ಗೆ ಕೇಳಿದ್ದೆ, ಅದಕ್ಕೆ ಉತ್ತರ ಕೊಟ್ಟಿಲ್ಲಾ.